ಇನ್ನು ಸೆಕ್ಷನ್ನು 17ರಲ್ಲಿ ಹೇಳಿರುವುದನ್ನು ನೋಡಿದರೆ ಈ ಸೆಕ್ಷನ್‌ನಲ್ಲಿ ಏನು ಹೆಚ್ಚು ವಿಶೇಷ ಅವಕಾಶ ಎದ್ದಿತೋ ಅದಲ್ಲವೂ ಹೋಗುತ್ತದೆ. ಇಲ್ಲಿ ಇಂತಹ ಸೆಕ್ಷನ್ನುಬೇಕಾಗಿಯೇ ಇರಲಿಲ್ಲ. ಸೆಕ್ಷನ್ 17ರ ಪ್ರಕಾರ ಪ್ರೊಸೀಡು ಮಾಡಬೇಕಾದರೆ ಬಾಕಿ ಏನು ಸೆಕ್ಷನ್ನುಗಳಿವೆಯೋ ಅವೆ ಸಾಕಾಗಿದ್ದುವು. ಹಿಂದೆ ಅಕ್ಸಿಸಿಷನ್ ಆಕ್ಟ್ ಮಾಡುವಾಗ ಸ್ವಲ್ಪ ದೂರದೃಷ್ಟಿ ಇಟ್ಟುಕೊಂಡು ಮಾಡಿದ್ದಾರೆ. ಈ ರೀತಿ ಮಾಡಿದರೆ ಅಕ್ಸಿಸಿಷನ್ನು ಮಾಡುವ ಕೆಲಸ ಕಾರ್ಯಗಳಿಗೆ ಅಡ್ಡಿ ಬರುತ್ತದೆ. ಯಾವ ಸಂದರ್ಭದಲ್ಲಿಯೇ ಆಗಲಿ ವೈಯಕ್ತಿಕವಾಗಿ ಅವರಿಗೆ ಇರತಕ್ಕ ಹಕ್ಕು ಬಾಧ್ಯತೆಗಳನ್ನು, ಅವರಿಗೆ ಇರತಕ್ಕ ಸವಲತ್ತುಗಳನ್ನು ಕಸಿದುಕೊಳ್ಳುವುದು ಸರಿಯೇ ಎನ್ನುವುದನ್ನು ಯೋಚನೆ ಮಾಡಬೇಕು. 17ನೆಯ ಸೆಕ್ಷನ್‌ನಲ್ಲಿ 'dwelling houses' ಸೇರಿಸಿದ್ದಾರೆ. ಕೆರೆ ಕಟ್ಟುವುದಕ್ಕೆ, ಬಾವಿ ತೋಡುವುದಕ್ಕೆ, ರಸ್ತೆ ಮಾಡುವುದಕ್ಕೆ, ಮನೆ ಕಟ್ಟುವುದಕ್ಕೆ ಎಂದು ಎಲ್ಲವನ್ನೂ ಸೇರಿಸಿದ್ದಾರೆ. ಯಾವುದನ್ನೂ ಬಿಟ್ಟಿಲ್ಲ. ಇದರಿಂದ ಇತರ ಸೆಕ್ಷನ್ನುಗಳು ಉಪಯೋಗಕ್ಕೇ ಬರುವುದೇ ಇಲ್ಲ. ಯಾವುದಾದರೂ acquisition proceedings ನಡೆಸಬೇಕಾದರೆ, this is so emergent ಎಂದರೆ ಅದರ ಕೆಲಸ ಮುಗಿಯಿತು. ಆದುದರಿಂದ ಸೆಕ್ಷನ್ 17ರಲ್ಲಿ ಇಷ್ಟೊಂದು ಅವಕಾಶಗಳನ್ನು ಮಾಡಿ ಕೊಳ್ಳತಕ್ಕದ್ದು ಸರಿಯೇ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಈ ರೀತಿ ಮಾಡುವುದು ಸರಿಯಿಲ್ಲವೆನ್ನುವುದು ನನ್ನ ಭಾವನೆ.

ಸ್ಯಾವಿ, ಅಕ್ಸಿಸಿಷನ್ ಸಂಬಂಧದಲ್ಲಿ ದೇಶದಲ್ಲಿನ ಜನ ಬಹಳ ತೊಂದರೆಗೀಡಾಗಿದ್ದಾರೆ. ನನಗೆ ಆಗದವರು ಇದ್ದರೆ ಅವರ ಜಮೀನನ್ನು ಅಕ್ವೈರ್ ಮಾಡಿಸಬೇಕೆಂದು ನಾನು ಪ್ರಯತ್ನಿಸುವುದು, ನನ್ನ ಜಮೀನನ್ನು ಅಕ್ವೈರ್ ಮಾಡಿಸಬೇಕೆಂದು ಮತ್ತೊಬ್ಬ ಪ್ರಯತ್ನಿಸುವುದು ಹೀಗೆ ನಾನಾ ರೀತಿ ನಡೆಯುತ್ತಿದೆ. ಇದಕ್ಕೆ ಅವಕಾಶವಿರಬಾರದು. ಯಾರು ಜಮೀನನ್ನು ಕಳೆದುಕೊಳ್ಳುತ್ತಾರೆಯೋ ಅವರಿಗೆ ಇರುವ ತೊಂದರೆಗಳನ್ನು, ಕುಂದುಕೊರತೆಗಳನ್ನು ಹೇಳುವುದಕ್ಕೆ ಒಂದು ಅವಕಾಶವಿರಬೇಕು. ಬಹಳ ವಿಶೇಷವಾದ ಸಂದರ್ಭದಲ್ಲಿ ದೇಶದ ಬಹಳ ಪ್ರಾಮುಖ್ಯವಾದ ಅರ್ಥ ಒಂದು ವಿಷಯ ಬಂದಂಥ ಕಾಲದಲ್ಲಿ ಅವರು ತ್ಯಾಗ ಮಾಡಬೇಕೆಂಬ ತತ್ವವನ್ನು ನಾವು ಅಂಗೀಕರಿಸಿದರೂ ವೈಕ್ತಿಕ ಸ್ವಾತಂತ್ರ್ಯ ಮತ್ತು ಅವನಿಗೆ ಇರತಕ್ಕ ಅವಕಾಶಗಳನ್ನು ನಾವು ಮೊಟಕು ಮಾಡಬಾರದು. ಈ ದೃಷ್ಟಿಯಿಂದ ಈ ತಿದ್ದುಪಡಿಯು ಅಷ್ಟೊಂದು ಸಾಧ್ಯವಾಗಿದೆ ಎಂದು ನಾನು ತಿಳಿದುಕೊಂಡಿಲ್ಲ. ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಬಹಳ drastic ಆಗಿ ಹೋಗುತ್ತಿದ್ದಾರೆನ್ನುವ ಭಾವನೆ ವ್ಯಕ್ತವಾಗುತ್ತದೆ. ಇದರಿಂದ ಬಹಳ ಜನಗಳಿಗೆ ತೊಂದರೆಯಾಗುತ್ತದೆ. ಈ ಕಾನೂನಿನಲ್ಲಿ ಏನು ನಿರೀಕ್ಷಣೆ ಮಾಡಿದ್ದೀವೋ ಅದರ ಪ್ರತಿಫಲ ದೊರೆಯುವುದಿಲ್ಲವೆಂದು ಹೇಳುತ್ತೇನೆ. ಈ ತಿದ್ದುಪಡಿಯ ಮಸೂದೆಯನ್ನು ವಿಮರ್ಶೆ ಮಾಡಿ, ಇರತಕ್ಕ ತೊಂದರೆಗಳನ್ನು, complicationsನ್ನು ಕಡಮೆ ಮಾಡಬೇಕು. ಅಕ್ವಿಜೀಷನ್ ಪ್ರೊಸೀಡಿಂಗ್ಸ್ ಮಾಡಬೇಕೆಂಬ ವಿಷಯವನ್ನು ಮಾತ್ರ ತಲೆಯಲ್ಲಿಟ್ಟುಕೊಂಡು ತಿದ್ದುಪಡಿಯನ್ನು ಯೋಚನೆ ಮಾಡಬೇಕಾಗಿಲ್ಲ. ದೇಶದ ಹಿತದೃಷ್ಟಿಯಿಂದ ಅಕ್ವಿಸಿಷನ್ ಕಾರ್ಯ ನಡೆಯಬೇಕು. ಆದರೆ ಆ ರೀತಿ ಆಗುವಾಗ ಅದರಿಂದ ತೊಂದರೆ ಪಡುವವರ ವಿಚಾರವನ್ನೂ ಗಮನದಲ್ಲಿಟ್ಟುಕೊಳ್ಳಬೇಕು. ಈ ದೃಷ್ಟಿಯಿಂದ ಈ ತಿದ್ದುಪಡಿಯನ್ನು ಪೂರ್ಣವಾಗಿ ಬದಲಾಯಿಸಿ ಸರಿಪಡಿಸಬೇಕೆಂದು ಹೇಳಿ, ಈ ಮಸೂದೆಗೆ ನನ್ನ ಬೆಂಬಲವನ್ನು ಕೊಡುತ್ತೇನೆ.

†ಶ್ರೀ ಸಿ. ಜಿ. ಮುಕ್ಕಣ್ಣಪ್ಪ (ಗುಬ್ಬಿ) —ಮಾನ್ಯ ಅಧ್ಯಕ್ಷರೇ, ಈ ತರಾತುರಿಯಲ್ಲಿ ಈ ಮಸೂದೆಯನ್ನು ಪಾಸ್ ಮಾಡಬೇಕೆಂದು ಸರ್ಕಾರ ಮನಸ್ಸು ಮಾಡಿರುವುದು ಬಹಳ ಸೋಜಿಗದ ಸಂಗತಿ.

ಶ್ರೀ ಕಡಿದಾಳ್ ಮಂಜಪ್ಪ —ತರಾತುರಿ ಏನೂ ಇಲ್ಲ; ಈ ಮಸೂದೆಯು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗುತ್ತದೆ.

ಶ್ರೀ ಸಿ. ಜಿ. ಮುಕ್ಕಣ್ಣಪ್ಪ —ಇದಕ್ಕೆ ಏನೇನು formalities ಆಗಬೇಕೋ ಅವೆಲ್ಲ ಆಗುತ್ತವೆ. ದೇಶದ ಜನತೆಯ ಕಾರ್ಯ ಮಾಡುವುದರಲ್ಲಿ ಇಷ್ಟು ಅತುರವಾಗಿರತಕ್ಕ ಸರ್ಕಾರ ಇಂಥ ಅತ್ಯುತ್ತಮವಾದ ಕಾನೂನುಗಳನ್ನು ಕಡತಕ್ಕೆ ಏರಿಸುವಾಗ ಏಕೆ ಇದುವರೆಗೂ ನಿದ್ದೆ ಮಾಡುತ್ತಿತ್ತು ಎಂದು ಕೇಳಿದೆ. ವಿಧಿ ಇಲ್ಲ. ಸರ್ಕಾರದ ಉದ್ದೇಶ ಒಳ್ಳೆಯದಿರಬಹುದು. ಮನೆ ಕಟ್ಟುವುದಕ್ಕೆ ಮತ್ತು ಇತರ ಕೆಲಸಗಳಿಗೆ ಜಮೀನನ್ನು ಅಕ್ವೈರ್ ಮಾಡಬೇಕು. ಹಾಗೆ ಜಮೀನನ್ನು ಅಕ್ವೈರ್ ಮಾಡಿ ಕೊಡದೆ ಹೋದರೆ, ಮನೆ ಇಲ್ಲದೆ ಜನರು ತೊಂದರೆ ಪಡುತ್ತಾರೆ, ಅಕ್ವಿಜಿಷನ್ ಮಾಡುವುದಕ್ಕೆ ಬಹಳ ತಕರಾರುಗಳು ಬರುತ್ತವೆ. ಅದಕ್ಕೋಸ್ಕರವಾಗಿ ಈ ಕಾನೂನನ್ನು ಕಡತಕ್ಕೆ ಏರಿಸಬೇಕು, ಅಕ್ವಿಜಿಷನ್ ಕ್ರಮವನ್ನು ತ್ವರಿತಗೊಳಿಸಬೇಕು ಎಂದು ಸರ್ಕಾರದ ಉದ್ದೇಶ ಒಳ್ಳೆಯದಿರಬಹುದು. ಆದರೆ ಆ ಉದ್ದೇಶ ಕಾರ್ಯಗತವಾಗಬೇಕಾಗಿದ್ದರೆ, ಆ ಉದ್ದೇಶ ನಿಜವಾಗಿಯೂ ಫಲಪ್ರದವಾಗಬೇಕಾಗಿದ್ದರೆ, ಎಂಥ ಕಾನೂನನ್ನು ಮಾಡಬೇಕು, ಎಂಥ ತಿದ್ದುಪಡಿಗಳನ್ನು ತರಬೇಕು ಎಂಬುದನ್ನು ಯೋಚನೆ ಮಾಡಬೇಕು. ಈ ಮಸೂದೆಯಲ್ಲಿ ತಿದ್ದುಪಡಿಗಳನ್ನು ಜನರಿಗೆ ತೊಂದರೆಯಾಗದ ರೀತಿಯಲ್ಲಿ ತಂದಿದ್ದಾರೆಯೇ ಎಂದರೆ, ಇಲ್ಲ. ಎಲ್ಲ ಅಧಿಕಾರವನ್ನೂ ಕೂಡ ಸರ್ಕಾರವೇ ವಹಿಸಿಕೊಂಡು ಸರ್ಕಾರದ ಮುಖಾಂತರವೇ ಎಲ್ಲವೂ ನಡೆಯಬೇಕು ಎಂದು ಮಾಡಿದಂತೆ ಇದೆ. ಈ ತಿದ್ದುಪಡಿಗಳು ಮತ್ತೊಂದು ಯಾವುದನ್ನೂ ತರದೆ ಒಂದೇ ಒಂದು ಮಾತಿನಲ್ಲಿ ಎಲ್ಲ ಅಕ್ವಿಜಿಷನ್ ಕೇಸುಗಳೂ ಕೂಡ ಸಬ್‌ಡಿವಿಷನ್ ಆಫೀಸರಿಂದ ಸರ್ಕಾರದವರೆಗೂ ಬಂದು, ಸರ್ಕಾರದಿಂದ ಅಬ್ಜೆರಾಗಿ ತೀರ್ಮಾನವಾಗಬೇಕು, ಕೊನೆಯ ತೀರ್ಮಾನ ಸರ್ಕಾರದಲ್ಲಿಯೇ ಇರುತ್ತದೆಂದು ಮಾಡಿದ್ದರೆ ಸಾಕಾಗುತ್ತಿತ್ತು. ಹಾಗೆ ಮಾಡದೆ ಈ ತಿದ್ದುಪಡಿಗಳನ್ನು ನಡೆಯ ಮುಂದೆ ತಂದು, ಇವನ್ನು ಒಪ್ಪಬೇಕೇ ಬಿಡಬೇಕೇ ಎಂಬ ವಿಷಯದಲ್ಲಿ ಚರ್ಚೆಯಾಗಿ ತೀರ್ಮಾನವಾಗುವಂತೆ ಮಾಡಿದ್ದಾರೆ. ಈ ಮಸೂದೆಯ ಕೊನೆಯಲ್ಲಿ ಕೊಟ್ಟಿರುವ Statement of Objects and Reasons

ನಲ್ಲರುವುದನ್ನೆಲ್ಲ ನೋಡಿದರೆ ಮತ್ತು ಈ ಮಸೂದೆಯನ್ನು ಓದಿದರೆ ಸರ್ಕಾರ dictator ಆಗಬೇಕು, ಸರ್ಕಾರದಲ್ಲಿ ಖಾತೆ ಹೊಂದಿರತಕ್ಕ ಮಂತ್ರಿಗಳು ಹಿಟ್ಲರನಂತೆ ವರ್ತಿಸಬೇಕು, ತಮಗೆ ಬೇಕಾದವರಿಗೆ ಒಳ್ಳೆಯದನ್ನು ಮಾಡಬೇಕು, ಬೇಡವಾದವರಿಗೆ ತೊಂದರೆಯನ್ನು ಮಾಡಬೇಕೆಂದು ಇದನ್ನು ತಂದಿದ್ದಾರೆಂದು ಗೊತ್ತಾಗುತ್ತದೆ. ಈ ಸಂದರ್ಭದಲ್ಲಿ ನಾನು ಒಂದೇ ಒಂದು ವಿಷಯವನ್ನು ಅರಿಕೆ ಮಾಡಿಕೊಳ್ಳುತ್ತೇನೆ. 1945 ರಲ್ಲಿ ಬೊಂಬಾಯಿ ಸರ್ಕಾರ ಗೋಕಾಕ್ ನಲ್ಲಿ ಅಗ್ರಿಕಲ್ಚರಲ್ ಪ್ರಾಡ್ಯೂಸ್ ಮಾರ್ಕೆಟಿಂಗ್ ಸೊಸೈಟಿಗೆ ಜಮೀನನ್ನು ಅಕ್ವೈರ್ ಮಾಡಬೇಕೆಂದು ಅದರಿಂದ 24 ಸಾವಿರ ರೂಪಾಯಿಗಳನ್ನೂ ಜಮಾ ಮಾಡಿಸಿಕೊಂಡು, ಜಮೀನನ್ನು ಅಕ್ವೈರ್ ಮಾಡಿದರು. ಮಾರ್ಕೆಟಿಂಗ್ ಸೊಸೈಟಿಯವರು 65 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಷೆಡ್‌ಗಳನ್ನು ಹಾಕಿ, ಸ್ವಲ್ಪ ಜಮೀನನ್ನು ವರ್ತಕರಿಗೂ ಕೊಟ್ಟು, ಅವರೂ ಸಹ ಷೆಡ್‌ಗಳನ್ನು ಹಾಕಿ, ಇಷ್ಟೆಲ್ಲ ಮಾಡಿ ನುಪಾರು ಎರಡು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅಭಿವೃದ್ಧಿ ಮಾಡಿರಬೇಕಾದರೆ ಕೊನೆಯ ಗಳಿಗೆಯಲ್ಲಿ ಸರ್ಕಾರದಿಂದ ಒಂದು ನೋಟಿಫಿಕೇಷನ್ ಹೊರಟಿತು. ಇದರಲ್ಲಿರತಕ್ಕ ರಾಜಕೀಯವೇನು? ಇದೆನ್ನೆಲ್ಲ ನೋಡಿದರೆ ಇವರು ಮಾಡಿರತಕ್ಕ ಕಾನೂನುಬಾಹಿರವಾದ ಕೆಲಸಗಳಿಗೆ ಈ ಸಭೆಯಿಂದ ಸೀಲ್ ಒತ್ತಿಸಿಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿರುವಂತಿದೆ. ಇದು ಇನ್ನೂ ಸೋಜಿಗದ ಸಂಗತಿಯಲ್ಲವೇ! ಬೊಂಬಾಯಿ ಕಾನೂನಿನಲ್ಲಿ ಎನಿತೋ ಅದನ್ನು ಈ ತಿದ್ದುಪಡಿಯ ಮಸೂದೆಯ ಮುಖಾಂತರ ಇಲ್ಲಿ ಸೂಚನೆ ಮಾಡಿದ್ದೇವೆ, ಬೊಂಬಾಯಿನಲ್ಲಿ ಏನು ಕಾನೂನಿತ್ತು ಆ ಪ್ರಕಾರ ಒಂದೇ ತೆರನಾದ ಕಾನೂನು ಅಕ್ವಿಜಿಷನ್ ಸಂಬಂಧದಲ್ಲಿ ರಬೇಕು, ಏಕಮುಖವಾದ ಕಾನೂನನ್ನು ಮಾಡಬೇಕು ಎಂದು ಹೇಳಿದ್ದಾರೆ. ಆದರೆ ಈ ರೀತಿಯಾಗಿ ಮಾಡಲು ಹೊರಟಾಗ ಅದರ ಹಿಂದಿರತಕ್ಕ ಪೆಡಂಭೂತವಾದ ಒಂದೇ ಒಂದು ಸಂಗತಿಯನ್ನು ಯೋಚನೆ ಮಾಡಿದರೆ ಎಷ್ಟು ದೂರ ರಾಜಕೀಯದಲ್ಲಿ ಹೋಗಿದ್ದಾರೆಂಬುದು ಗೊತ್ತಾಗುತ್ತದೆ. 1945ರಲ್ಲಿ ಪ್ರಾರಂಭವಾದ ಅಕ್ವಿಜಿಷನ್ ಪ್ರೊಸೀಡಿಂಗ್ಸ್ 1956 ರಲ್ಲಿ ವಿಶಾಲ ಮೈಸೂರು ಆದಮೇಲೆ, ಕಾಂಗ್ರೆಸ್ ಪಕ್ಷದ ಕೈಯಲ್ಲಿ ಬಂದು, ವಿಶಾಲ ಕರ್ನಾಟಕದ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಿಜಲಿಂಗಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದ ಎಂ. ಪಿ. ಪಾಟೀಲ್ ಅವರೂ ಆಗಬಹುದು ಎಂದು ಹೇಳಿದ್ದುದನ್ನು ಯಾವ ಆಧಾರದ ಮೇಲೆ ವಾಪಸು ತೆಗೆದುಕೊಂಡು ಸರ್ವಾಧಿಕಾರಿ ಧೋರಣೆ ವರ್ತಿಸಿದರು? ಎರಡು ಸರ್ಕಾರಗಳು, ಒಂದು ಮುಂಬೈ ಸರ್ಕಾರ, ಒಂದು ನಮ್ಮ ಪ್ರಜಾಸರ್ಕಾರ, ಯಾವುದನ್ನು ಸರಿ ಎಂದು ಮಾಡಿದ್ದುವೋ ಅದನ್ನು ಈಗಿರುವ ಸರ್ಕಾರದವರು ಮಣ್ಣುಪಾಲು ಮಾಡಿದ್ದಾರೆ, ಲಂಗು ಲಗಾಮು ಇಲ್ಲದೆ ಇರತಕ್ಕ ಕುದುರೆಗಳನ್ನು ಹಿಡಿಯುವುದಕ್ಕೆ ಕಷ್ಟಪಡುವಂತಹ ಪರಿಸ್ಥಿತಿಯುಂಟಾಗಿದೆ. ಇನ್ನು ಅರ್ಧ ಗಳಿಗೆಯೂ ಈಗಿನ ಸರ್ಕಾರ ಅಧಿಕಾರದಲ್ಲಿರುವುದಕ್ಕೆ ಸಮರ್ಥವಾಗಿಲ್ಲ, ಇವರ ಕೈಯಲ್ಲಿ ಅಧಿಕಾರವನ್ನು ಕೊಟ್ಟು ಜನ ಪಡುತ್ತಿರುವ ಕಷ್ಟವನ್ನು ನೋಡುವುದಕ್ಕಿಂತಲೂ ರಾಜ್ಯಪಾಲರ ಕೈಯಲ್ಲಿ ಆಡಳಿತವನ್ನು ಕೊಡುವುದಕ್ಕೆ ಜನತೆ ಒಪ್ಪಬಹುದು ಎಂದು, ಈ ಸಭೆಯಲ್ಲಿ ತಮಗೆ ಹೇಳುತ್ತಿದ್ದೇನೆ. ಎರಡು ಲಕ್ಷರೂಪಾಯಿ ಖರ್ಚುಮಾಡಿರುವ ಗೋಕಾಕ ಅಗ್ರಿಕಲ್ಚರಲ್ ಪ್ರಾಡ್ಯೂಸ್ ಮಾರ್ಕೆಟಿಂಗ್ ಸೊಸೈಟಿಗೆ ಇವರು ಮಾಡಿರುವ ಅನ್ಯಾಯವನ್ನು ಯಾರೂ ಸಹಿಸಲಾರರು. 1945 ರಲ್ಲಿ ಮೊರಾರ್ಜಿ ಸರ್ಕಾರ ಸೀರ್ ಹಾಕಿ, ಎಂ. ಪಿ. ಪಾಟೀಲ್ ಅವರು ಇಲ್ಲಿ ಮಂತ್ರಿಗಳಾಗಿದ್ದಾಗ ಒಪ್ಪಿಗೆ ಕೊಟ್ಟಿದ್ದಕ್ಕೆ ಇವರು ಈಗ ಒಂದು ಕುಂಟುನೆಪ ಹಾಕಿ ಬೇಡ ಎಂದು ಹೇಳಿರುವುದು ಸರಿಯೇ?

5 P.M.

ಇಂಥ ಒಬ್ಬ ಮನುಷ್ಯನು ನಾಳೆ ಇಂಥಕಡೆ ಎರೆಕ್ಷನ್‌ಗೆ ನಿಲ್ಲುತ್ತಾನೆಂಬುದು ತಮಗೆ ಗೊತ್ತಾದರೆ ಆಗ ನಮ್ಮ ಪಾರ್ಟಿ ಉಮೇದುವಾರರಿಗೆ ಓಟ್ ಬರುತ್ತದೆಯೋ ಬರುವುದಿಲ್ಲವೋ ಎಂಬ ಅನುಮಾನ ಬಂದಾಗ ಆ ಮನುಷ್ಯ ಎರಡು ಮೂರು ಲಕ್ಷರೂಪಾಯಿಗಳನ್ನು ಖರ್ಚು ಮಾಡಿ ಯಾವುದೋ ಒಂದು ಸ್ಥಳದಲ್ಲಿ ಒಂದು ಮಿಲ್ ವಗೈರೆ ಹಾಕಬೇಕೆಂದಿದ್ದಾಗ ಸರ್ಕಾರದವರು ಆ ಸ್ಥಳವನ್ನು ಅಕ್ವಯಿರ್ ಮಾಡಿಕೊಳ್ಳಬೇಕೆಂದು ಆ ಬಗ್ಗೆ ನಿಮಗೆ ಅಧಿಕಾರ ಕೊಡಬೇಕೆಂದರೆ ದೇಶನಾಶವಾಗಿ ಬಿಡುತ್ತದೆ. ಸರ್ಕಾರದವರು ಇಂಥ ಅಧಿಕಾರವನ್ನು ಕೇಳುವುದು ಸರಿಯಾದದ್ದೂ ಅಲ್ಲ, ನ್ಯಾಯವಾದದ್ದೂ ಅಲ್ಲ. ಈ ಹಿಂದೆ ಮಾತನಾಡಿದ ನನ್ನ ಸ್ನೇಹಿತರಾದ ಶ್ರೀ ಮೂಡಲಗಿರಿಗೌಡರು "ನಮ್ಮ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರು ಜನೋಪಯುಕ್ತ ಕಾರ್ಯಗಳನ್ನು ಬಹುವೇಗದಲ್ಲಿ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ." ಎಂದು ಹೇಳಿದರು. ಆದರೆ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಜನಗಳಿಗೆ ಉಪಕಾರವಾಗತಕ್ಕ ಕಾರ್ಯಗಳನ್ನು ಎಷ್ಟು ಉದ್ವೇಗದಿಂದ ಮಾಡುವುದಕ್ಕೆ ಹೋಗಿದ್ದಾರೆ, ಅಷ್ಟೇ ಉದ್ವೇಗದಿಂದ ಜನರಿಗೆ ತೊಂದರೆಗಳನ್ನೂ ಮಾಡುತ್ತಿದ್ದಾರೆಂದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಅವರು ಆಡತಕ್ಕ ಮಾತುಗಳು ನ್ಯಾಯವಾಗಿದ್ದರೂ ತಂದಿರತಕ್ಕ ಈ ತಿದ್ದುಪಡಿ ಮಸೂದೆಯಲ್ಲಿ ಅಟಂಬಾಂಬುಗಳನ್ನು ಇಟ್ಟೇಇದ್ದಾರೆ. ಇವರು ತಮ್ಮ ಅಧಿಕಾರಾವಧಿಯಲ್ಲಿ ಜನರಿಗೆ ಏನೋ ಅಷ್ಟಿಷ್ಟು ಅನುಕೂಲ ಕಲ್ಪಿಸತಕ್ಕ ಅವಕಾಶವಿರುವಾಗ ಇವರೇಕೆ ಹೀಗೆ ಪರೋಕ್ಷವಾಗಿ ಅಕ್ಕತ್ಯ, ಅಕ್ಷಮ್ಯ ಅಪರಾಧಗಳನ್ನು ಮಾಡಲು ಹೊರಟಿದ್ದಾರೋ ನನಗೆ ತಿಳಿಯದು. ಅದಾಗ ಬಾರದೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. 1937 ರಲ್ಲಿ ಪ್ರಾರಂಭವಾದ ಕೆಲವು ಅಕ್ವಿಜಿಷನ್‌ಗಳ ಬಗ್ಗೆ ಜನರಿಗಿನ್ನೂ ಪರಿಹಾರ ದೊರೆತಿಲ್ಲ. ಹಾಗೇ 1944-45 ನೆಯ ಸಾಲಿನಲ್ಲಿ ಅಕ್ವಯಿರ್ ಮಾಡಿಕೊಂಡ ಜಮೀನುಗಳಿಗಿನ್ನೂ ಈ ಹೊತ್ತಿನವರೆಗೂ ಪರಿಹಾರ ದ್ರವ್ಯವನ್ನು ಕೊಟ್ಟಿರುವುದಿಲ್ಲ. ಇಷ್ಟೊಂದು ತೀರ ಸಡಿಲವಾದ ಆಡಳಿತವಿರತಕ್ಕ ರಾಜ್ಯಾಡಳಿತ ಸ್ಥಾನದಲ್ಲಿ ಇವರು ತಲೆ ಎತ್ತಿಕೊಂಡು ಅಧಿಕಾರದಲ್ಲಿರುವುದಕ್ಕಿಂತ ಇಂದೇ ರಾಜೀನಾಮೆ ಕೊಟ್ಟು ಇವರು ಹೊರಗೆ ಬರತಕ್ಕದ್ದು ಬಹಳ ಒಳ್ಳೆಯದಲ್ಲವೇ ಎಂದು ಕೇಳುತ್ತೇನೆ! ಹೀಗೆ ಇವರ ಪ್ರತಿಯೊಂದು ತಿದ್ದುಪಡಿಯನ್ನೂ ಬದುತ್ತಾ ಹೋದರೆ ಇವರೆಲ್ಲರಿಗೂ ಅಧಿಕಾರದಾಹ ಎಷ್ಟರಮಟ್ಟಿಗೆ ತಲೆಗೇರಿದೆ ಎಂಬುದು ಎದ್ದುಕಾಣುತ್ತಿದೆ. ತಮಗೆ ಬೇಕಾದವರು, ತಮ್ಮ ಹಿತ್ತಲ ಬಾಗಿಲಕಡೆಯಿಂದ ಬರತಕ್ಕವರಿಗಾದರೆ ಆರು ಸಾವಿರ ರೂಪಾಯಿಗಳ ಕಾಂಪೆನ್‌ಸೇಷನ್ ನೀಡಲು ಇದರಿಂದ ಅನುಕೂಲವಿದೆ. ಬೇಡವಾದವರಿಗೆ ಕೇವಲ 150 ರೂಪಾಯಿಗಳೇ ಪರಿಹಾರ! ಸರ್ಕಾರಕೊಡುವ ಪರಿಹಾರ ಕಡಮೆ ಎಂದು ಕಂಡುಬಂದರೆ ಅಂಥಕಡೆ ಜಾಸ್ತಿಕೊಡಲು ಸರ್ಕಾರದವರೇನು ಮಾಡಿದ್ದಾರೆ! ಎಲ್ಲಯಾದರೂ ಆ ಬಗ್ಗೆ ಒಂದು 'ಚ' ಕಾರವನ್ನಾದರೂ ಹೇಳಿದ್ದಾರೆಯೆ!

Sri KADIDAL MANJAPPA.—Can the Hon'ble Member point out a single case, when the Government have enhanced the compensation ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಅಧ್ಯಕ್ಷರೇ, ಇನ್ನು ಮೇಲೆ ಶ್ರೀಮಾನ್ ಕಡಿದಾಳ್‌ಮಂಜಪ್ಪನವರಿಗೆ ಈ ಮನೆಯ ಪಾಸಾದ ಮೇಲೆ ಅವರಿಗೆ ಸರ್ವಾಧಿಕಾರತ್ವ ಬಂದು ಬಿಡುತ್ತದೆ. ತಮ್ಮ ಬತ್ತಳಿಕೆಯ ತುಂಬ ಬಾಣಗಳು ಮಾತ್ರ ಇದ್ದುವು. ಈಗ ಬಿಲ್ಲನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿದ್ದೀರಿ. ಏಕೆ? ಮುಂದೆ ಜನರನ್ನು ಬೇಜೆಯಾಡುವುದಕ್ಕೆ! ಇಂಥ ನೀಚ ಕಾನೂನುಗಳನ್ನೇಕೆ ಮಾಡುತ್ತಾರೆ? I cannot understand the intention of the Government. Why should they amend this Act? If at all they want to do justice to the people, the amendment must be very specific and clear in its meaning. ಈ ರೀತಿ ಎಲ್ಲೆ ಮಾಡಿದ್ದೀರಿ? ಈಗ ತಾವು ಮಾಡಿರತಕ್ಕದ್ದೇನು? The proceedings can be called for ಎಂದು ಮಾಡದೆ, ರೆಕಾರ್ಡ್‌ನ್ನು ಕಾಲ್‌ಫಾರ್ ಮಾಡುತ್ತೇವೆಂದು ಏಕೆ ಹೇಳಿದ್ದೀರಿ? ಆ ಪ್ರೊಸೀಡಿಂಗ್ಸ್‌ಗಳು ತಪ್ಪಾಗಿದ್ದರೆ you can nullify the whole affair ಎಂದು ಹೇಳಿ ಬಿಡಿ, ಹೀಗೆ ಮಾಡದೆ ಅವರು ಮಾಡತಕ್ಕ ಆರ್ಥಮೆಟಿಕಲ್ ತಪ್ಪುಗಳಿದ್ದರೆ— ಅಂದರೆ ಹಾಗೆ ಒಂದು ಸಾಮಾನ್ಯ ಮಗ್ಗಿ ಕೋಷ್ಟಕ ಮಾಡಲಾರದೆ ಇರತಕ್ಕ ಅಧಿಕಾರಿಗಳನ್ನು ಇವರೇಕೆ ಇಟ್ಟು ಕೊಂಡಿದ್ದಾರೆ? 6×3=18 ಎಂದು ಹೇಳಲು ಬಾರದೆ 6×3=24 ಎಂದು ಹೇಳುವಂಥ ಅಧಿಕಾರಿಗಳನ್ನೇಕೆ ಇಟ್ಟು ಕೊಂಡಿದ್ದಾರೋ ಇದು ನನಗಂತೂ ಒಂದೂ ಅರ್ಥವಾಗುತ್ತಿಲ್ಲ. Why should you not ask the Assistant Commissioner or the Deputy Commissioner to make an award ? ಅದಕ್ಕೆ ಬದಲಾಗಿ The Assistant Commissioner to build up records, the Deputy Commissioner to forward the records, the Government to take the final dicision. ಇದ್ದೆಲ್ಲ ನನಗಂತೂ ಒಂದೂ ಸರಿಯಾಗಿ ಅರ್ಥವೇ ಆಗುತ್ತಿಲ್ಲ.

Sri KADIDAL MANJAPPA.—Even intelligent people like you commit such a mistake.

Sri C. J. MUCKANNAPPA.—Intelligent people like you and Sri Jatti—Chief Minister of Mysore, have erred on the wrong side. You have not done good to the people. You are not willing to do it. That is my contention. What is it that you have done by amending this law ? ಆದರೆ ತಾವು ಹೀಗೆ ನಮ್ಮ ಜಾಣತನವನ್ನು ಪ್ರಶ್ನೆ ಮಾಡುವ ಮುನ್ನ ತಮ್ಮ ಜಾಣತನವನ್ನು ಯಾವ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ್ದೀರೆಂಬುದನ್ನು ಮೊದಲು ನೀವು ನೋಡಿಕೊಳ್ಳಿರಿ, ನಿಮಗೇಕೆ ಇಷ್ಟು ಅಧಿಕಾರದಾಹ ಉಂಟಾಯಿತೋ ನಾನು ಕಾಣೆ. ರಾಮ-ರಾಮ! ಶಿವ-ಶಿವ! ಆ ಬನ್ನಪ್ಪನವರಿಗಾದರೂ ಕೂಡ ಇಷ್ಟೊಂದು ಅಧಿಕಾರ ದಾಹವಿರಲಿಲ್ಲ! ಈ ಒಂದು ಸಾಮಾನ್ಯ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಒಬ್ಬ ಸಾಮಾನ್ಯ ರೆವಿನ್ಯೂ ಇನ್‌ಸ್ಪೆಕ್ಟರಿಂದ ಪ್ರಾರಂಭವಾಗಿ ತಹಸೀಲ್ದಾರನಿಂದಹಿಡಿದು ಸರ್ಕಾರದವರೆಗೂ ನಡೆಯಬೇಕೇ? ಈ ವಿಷಮಯ ವಾತಾವರಣದ ಗಾಳಿ ನಾಳೆ ಎತ್ತಕಡೆ ಬೀಸುವುದೋ ಗೊತ್ತಿಲ್ಲ! ಅವನ ಕಡೆಗೆ ಬೀಸಿದರೂ ಆಯಿತು. ಇಲ್ಲವೇ ಇವನ ಕಡೆಗೆ ಬೀಸಿದರೂ ಆಯಿತು. ಅಂತು ಮುಂದೆ ಇದರಿಂದ ಯಾರುಯಾರ ಮನೆಗಳು ಹಾಳಾಗಿ ಶ್ಮಶಾನಗಳಾಗುತ್ತವೋ ಗೊತ್ತಿಲ್ಲ! ಆದಕಾರಣ ನಾನೀಗ ಶ್ರೀಮಾನ್ ಮಂಜಪ್ಪನವರಿಗೆ ಹೇಳುವುದೇನೆಂದರೆ "ನಿಮಗೆ ಇಂಥ ಅಧಿಕಾರ ಬೇಡ. ನೀವು ಇಂಥ ಅಧಿಕಾರದಲ್ಲಿದ್ದರೆ ಜನರು ನಿಮಗೆ ಶಾಪ ಹಾಕುತ್ತಾರೆ. ಆದುದರಿಂದ ನೀವು ಆ ಅಧಿಕಾರವನ್ನು ಬಿಟ್ಟುಬಿಡಿ" ಎಂದು ಹೇಳುತ್ತಿದ್ದೇನೆ. ಇಂಥ ಪಾಪ ಕಾರ್ಯವನ್ನು ಇವರೇಕೆ ಮಾಡಬೇಕು! ಇವರ ಪಾರ್ಟಿಯಲ್ಲಿ ಅಧಿಕಾರಕ್ಕಾಗಿ ಆತುರಪಡತಕ್ಕ ಜನರು ಅನೇಕರಾಗಿದ್ದಾರೆ. ಇಂಥ ಪಾಪ ಕಾರ್ಯವನ್ನು ಬೇರೆ ಯಾರಾದರೂ ಮಾಡಿಕೊಂಡುಹೋಗಲಿ—ಇವರಿಗೆ ಮಾತ್ರ ಬೇಡವೆಂದು ಹೇಳುತ್ತೇನೆ.

ಆದರೆ ಮೊದಲು ಈ ಬಿಲ್ಲನ್ನು ಡ್ರಾಪ್ ಮಾಡಿ ತಂದು ಶ್ರೀ ಮಂಜಪ್ಪನವರ ಕೈಗೆ ಕೊಟ್ಟರಲ್ಲಾ ಆಗೇಕೆ ಇವರು ಈ ಬಿಲ್ಲನ್ನು ಓದಲಿಲ್ಲ ಎಂದು ಕೇಳಬೇಕಾಗಿದೆ.

'ಶ್ರೀ ಕಡಿದಾಳ್ ಮಂಜಪ್ಪ—ಅಷ್ಟು ಬುದ್ಧಿಯಿದ್ದರೆ ತಾನೆ!'

ಶ್ರೀ ಸಿ. ಜೆ. ಮುಕ್ಕಣ್ಣಪ್ಪ—ಇತ್ತೀ—ಇಲ್ಲವೇ ಎಂಬ ಪ್ರಶ್ನೆ ಹಾಗಿರಲಿ. ಆದರೆ ಅದುರ್ಯೋಧನನಿಗೆ ಅಕ್ಷೋಹಿಣಿ ಸೈನ್ಯದ ಬಲ ಹೇಗಿತ್ತೋ ಹಾಗೆ ನಿಮಗೂ ಇಲ್ಲಿ ಅಂಥ ಪಕ್ಷದ ಬಲವಿದೆ. ಅವರೆಲ್ಲರೂ ಕೈಯೆತ್ತಿ ಬಿಡುತ್ತಾರೆಂಬ ಧೈರ್ಯ ನಿಮಗಿದೆ. ಆದರೆ ಕೃಷ್ಣ ಪರಮಾತ್ಮನೊಬ್ಬನ ಸಹಾಯ ಪಡೆದಿದ್ದ ಪಂಚಪಾಂಡವರೇ ಕಡೆಗೆ ಗೆದ್ದರೆಂಬುದನ್ನು ಆ ಅಕ್ಷೋಹಿಣಿ ಸೈನ್ಯದ ಕಡೆಯಿದ್ದ ಭೀಷ್ಮ, ಕರ್ಣ, ಅಶ್ವತ್ಥಾಮ, ಕೃಪ ಇತ್ಯಾದಿಯವರೆಲ್ಲ ಹೇಗೆ ಜೂರು ಜೂರಾದರೋ ಹಾಗೆಯೇ ಈ ಅಧಿಕಾರ ಪಕ್ಷವು ದೊಡ್ಡದಾಗಿದ್ದರೂ ಅವರು ಮಾಡತಕ್ಕ ಅಪರಾಧ ಕೃತ್ಯಗಳಿಗಾಗಿ ಅವರೆಲ್ಲರೂ ಕೃಷ್ಣ ಪರಮಾತ್ಮನೊಬ್ಬನಿಂದಲೇ ಹೆಸರು ಹೇಳುವುದಕ್ಕೂ ಉಳಿಯದಂತೆ ಅಳಿಯುತ್ತಾರೆ. ನಿರಪರಾಧಿಗಳಿಂದ ಜಮೀನನ್ನು ಕಿತ್ತುಕೊಳ್ಳುವಾಗ ಅವರ ಶಾಪ ನಿಮಗೆ ತಟ್ಟದೆ ಬಿಡುವುದಿಲ್ಲ. ಇವರು ತಂದಿರತಕ್ಕ ತಿದ್ದುಪಡಿಗೆ ಅಳತೆ ಆಳವೇ ಇಲ್ಲ. ನಾಳೆ ಇವರು ಆ ಮೈನೂರು ಮಹಾರಾಜರ ಜಮೀನನ್ನು ಬೇಕಾದರೂ ಕಿತ್ತುಕೊಳ್ಳಬಹುದು.

ಶ್ರೀ ಕಡಿದಾಳ್ ಮಂಜಪ್ಪ—ಹಾಗಾದರೆ ನೀವು ಯಾವತ್ತೂ ಯಾವ ಸರ್ಕಾರವೂ ಮಾಡದೆ ಇದ್ದಂಥ ಕೆಲಸವನ್ನು ಈಗ ನಾವು ಮಾಡಿರುತ್ತೇವೆಂದು ಹೇಳುತ್ತೀರಾ? ತಾವು ಹೇಳುತ್ತಿರುವುದನ್ನು ನೋಡಿದರೆ ಸರ್ಕಾರದವರು ಏನೋ ಮಾಡಬಾರದಂಥ ಒಂದು ಕೆಲಸವನ್ನು ಮಾಡಿದ್ದಾರೇನೋ ಎನ್ನುವ ರೀತಿಯಲ್ಲಿ ಹೇಳುತ್ತಿರುವಂತೆ ಕಾಣುತ್ತಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ—ಜತ್ತಿಯವರ ಮಂತ್ರಿ ಮಂಡಳಬಂದ ಮೇಲೆ ಜನರಿಗೆ ಅನುಕೂಲವಾಗುವಂಥ ಕೆಲಸಗಳನ್ನು ನೀವು ಏನು ಮಾಡಿದ್ದೀರಿ! ಏನೋ ಕೆಲವು ಕಾನೂನುಗಳನ್ನು ಏಕ ರೂಪಕ್ಕೆ ತಂದಾಕ್ಷಣಕ್ಕೆ ಅದರಿಂದ ಜನರೇನು ಉದ್ಧಾರವಾದಂತಾಗಲಿಲ್ಲ. ಆದಕ್ಕಾಗಿ ನಾನು ತಮ್ಮಲ್ಲಿ ವಿನಯದಿಂದ ಕೇಳುತ್ತೇನೆ. ಅಂಥ ಉಪಕಾರದ ಕಾರ್ಯಗಳನ್ನೇನಾದರೂ ಮಾಡಿದ್ದಲ್ಲಿ ಒಂದೆರಡು ಉದಾಹರಣೆಗಳನ್ನು ಹಾವೇಕೆ ಕೊಡಬಾರದು? ತಾವು ಏಕೆ ಇಷ್ಟು ಅಧಿಕಾರ ದಾಹ

ದಿಂದಿದ್ದೀರಿ? ಇಲ್ಲಿಯವರೆಗೂ ಈ ಅಧಿಕಾರ ಡೆಪ್ಯುಟಿ ಕಮೀಷನರುಗಳಿಗೆ ಇತ್ತು. ಅಸಿಸ್ಟೆಂಟ್ ಕಮೀಷನರುಗಳಿಂದ ಅಕ್ವಿಜಿಷನ್ ಪ್ರೊಸೀಡಿಂಗ್ಸ್ ಆದಮೇಲೆ ಡೆಪ್ಯುಟಿ ಕಮೀಷನರು ಅವಾರ್ಡ್ ಕೊಡುತ್ತಿದ್ದರು. ಆ ಅವಾರ್ಡ್ ಸಮರ್ಪಕವಾಗಿಲ್ಲದಿದ್ದರೆ ಜನರು ಅದರ ಮೇಲೆ ಡಿಸ್ಟ್ರಿಕ್ಟ್ ಕೋರ್ಟುಗಳಿಗೆ ಅಪೀಲ್ ಹೋಗುತ್ತಿದ್ದರು. ಈಗ ಸರ್ಕಾರದವರೇನು ಮಾಡಿದ್ದಾರೆಂಬುದನ್ನು ಅವರೇ ಆಲೋಚನೆ ಮಾಡಲಿ. ಜಮೀನು ಕಳೆದುಕೊಂಡವನಿಗೆ ದೊರೆಯತಕ್ಕ ಪರಿಹಾರ ದ್ರವ್ಯ ಕಡಮೆ ಆಯಿತೆಂದು ಕಂಡುಬಂದರೆ ಅಥವಾ ಜಮೀನು ಅಕ್ವಯಿರ್ ಮಾಡಿಕೊಂಡಿರುವುದೇ ಅನ್ಯಾಯ ಎಂದು ದೂರು ಹೇಳಿಕೊಳ್ಳತಕ್ಕವರ ಬಗ್ಗೆ ಸರ್ಕಾರದವರು ಏನುಪಾಪ ವಿಷ್ ಮಾಡಿದ್ದಾರೆ? Fertile lands should not be acquired for the purposes of extensions for the purpose of housing Harijans ಎಂದು ಮೊನ್ನೆ ಬೇರೊಂದು ಕಡೆ ಹಾಗೆ ಹೇಳಿದ್ದರೆ ಈ ದಿವನ ಈಗ ಇಲ್ಲಿ ಏನು ಹೇಳುತ್ತಿದ್ದಾರೆ? ಈ ಬಿಲ್ಲನ್ನು ಮಂತ್ರಿಗಳ ಮುಂದೆ ತಂದಿಟ್ಟಾಗ ಇವರೇಕೆ ಇದನ್ನೆಲ್ಲಾ ಚರ್ಚೆ ಮಾಡಲಿಲ್ಲ!

ಶ್ರೀ ಕಡಿದಾಳ್ ಮಂಜಪ್ಪ—ಹಾಲಿ ಇರತಕ್ಕ ಆಕ್ಟಿನಲ್ಲಿ ಯಾವ ರೀತಿ ಇತ್ತೋ ಅದೇ ರೀತಿ ಈಗಲೂ ಮಾಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ—ಹಿಟ್ಲರ್ ನತ್ತು ಹೋಗಿದ್ದಾನೆ. ಇನ್ನು ಹೇಗಾದರೂ ಅಧಿಕಾರವೆಲ್ಲ ನಮ್ಮ ಕೈಯಲ್ಲಿಯೇ ಇರುತ್ತದೆಂದು ಯಾರೋ ಭಾವಿಸಿದ್ದರಂತೆ. ಅಂಥಾ ಒಂದು ಭಾವನೆಯೇ ಇವರಲ್ಲೂ ಇದ್ದಹಾಗೆ ಕಾಣುತ್ತದೆ. ಅಷ್ಟು ವಿನಾ ಈ ಮಂತ್ರಿಗಳು ಈ ಬಿಲ್ಲಿನ ಬಗ್ಗೆ ತಮ್ಮ ವಿನ್ಡಂಮ್ಮನ್ನು ಉಪಯೋಗಿಸಿದಂತೆ ಕಾಣುತ್ತಿಲ್ಲ; ಮುಂದಾಲೋಚನೆಯಿಲ್ಲ. ಇಷ್ಟು ಜನರ ವಿನ್ಡಂ ಏಕೆ ಈ ತಿದ್ದುಪಡಿ ಮಸೂದೆಯ ಬಗ್ಗೆ ಮಾಯವಾಗಿದೆಯೋ ಗೊತ್ತಾಗುತ್ತಿಲ್ಲ. ಈ ವಿಚಾರದಲ್ಲಿ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಯಾರೋ ಒಬ್ಬ ದಡ್ಡ ಅಳಿಯ ಮಾವನ ಮನೆಗೆ ಹೋದಾಗ ಅವನಿಗೆ ವಿದ್ಯೆ ಬರುತ್ತದೆಯೋ ಎಂಬುದನ್ನು ಪರೀಕ್ಷೆ ಮಾಡಲು ಮೊದಲು ಒಂದು ಪುಸ್ತಕವನ್ನು ಕೊಟ್ಟಾಗ ಅದರಲ್ಲಿದ್ದ ಹಾಳೆಗಳನ್ನೆಲ್ಲ ತಿರುವಿಹಾಕಿ ಈ ಪುಸ್ತಕವನ್ನೆಲ್ಲಾ ಪೂರ್ತಿಯಾಗಿ ನಾನಾಗಲೇ ಓದಿದ್ದೇನೆಂದು ಹೇಳಿದನಂತೆ. ಆಗ ಮಾವ ಮತ್ತೊಂದು ಖಾಲಿ ಹಾಳೆಗಳ ಪುಸ್ತಕವನ್ನು ಕೊಟ್ಟಾಗಲೂ ಸಹ ಅದನ್ನು ತಿರುವಿ ಹಾಕಿ ಇದನ್ನೂ ಪೂರ್ತಿಯಾಗಿ ಓದಿದ್ದೇನೆ ಎಂದು ಹೇಳಿದನಂತೆ. ಆದರೆ ಈ ಸಂದರ್ಭಗಳಲ್ಲಿ ಹಾಗಾಗಬಾರದು. ಆದುದರಿಂದ ನಾನು ಶ್ರೀವರ್ತ ಮಂಜಪ್ಪನವರಿಗೆ ಹೇಳುವುದೇನೆಂದರೆ: ಅವರು ಈ ದಿವಸ ಸಾಯಂಕಾಲವೇ ಶ್ರೀ ಜತ್ತಿಯವರಲ್ಲಿಗೆ ಹೋಗಿ ನಾನು ಈ ತಿದ್ದು ಪಡಿ ಮಸೂದೆಯನ್ನು ಮಂಡಿಸಲು ತಯಾರಿಲ್ಲ, ತಾವೇ ಇದನ್ನು ಬೇರೆ ರಿಂದಾದರೂ ಮಂಡಿಸಿಕೊಳ್ಳಿ ಎಂದು ಅವರಿಗೆ ತಿಳಿಸಿ, ತಾವು ಆ ಮಂತ್ರಿಮಂಡಳ ಬಿಟ್ಟು ಈ ಚೆಗೆ ಬಂದು ಬಿಡಿ ಎಂದು ಕೇಳಿಕೊಳ್ಳುತ್ತೇನೆ. ಹಾಗೆ ಮಾಡದಿದ್ದರೆ ಮುಂದೆ ಮಂತ್ರಿಗಳು ಕಡಿವಾಣವಿಲ್ಲದ ಕುದುರೆಯಂತಾಗಬೇಕಾಗುವುದು. ಆಗಲೇ ಶ್ರೀ ಟಿ. ಎಕ್. ಮೂಡಲಗಿರಿಗೌಡರು ಹೇಳಿದನ್ನು ನೋಡಿದರೆ ನಾಳೆ ಅವರು ಮಂತ್ರಿಗಳಿಗೆ ಇನ್ನ ಓಟ್ ನಮ್ಮ ಪಾರ್ಟಿಗೆ ಬೀಳುತ್ತದೆ, ಈತನ ಜಮೀನು ಅಕ್ವಯಿರ್ ಮಾಡಬೇಡಿ, ನಮಗೆ ಓಟ್ ಹಾಕಿದವನ ಜಮೀನು ಬೇರೆ ಕಡೆಯಿದೆ, ಅದನ್ನು ಅಕ್ವಯಿರ್ ಮಾಡಿಕೊಳ್ಳಿ ಎಂದು ಹೇಳಿ ಬಿಟ್ಟರೆ ಆ ಅನಾಥನ ಹೊಲ ಗದ್ದೆ ತೋಟಗಳೆಲ್ಲ ಏನು ಗತಿಯಾದಾವು? ಏನಿದು? ಎಂಥ ಅಧಿಕಾರ ಇದು? ಇದೆಲ್ಲ ಆ ಅಕ್ವೋಹಿನ್ ಸೈನ್ಯದ ಬಲವೋ? ಆ ನೂರೊಂದು ಜನ ಕಾರವನ ಕಣಿ ಅಕ್ವೋಹಿನ್ ಸೈನ್ಯವಿದ್ದರೂ ಸತ್ಯವಿದ್ದ ೬ ಜನರ ಶಕ್ತಿಗೆ ಸೋಲಬೇಕಾಯಿತು. ಈಗಲೂ ಸರ್ಕಾರದವರ ಕಡೆ ೫ ಜನ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ನಡೆಯಬೇಕಾಗಿದೆ. ಆ ಜಂಟಿ ಸಲೆಕ್ಟ್ ಸಮಿತಿಯವರ ಮೇಲೆ ಬಹಳ ಗುರುತರವಾದ ಜವಾಬ್ದಾರಿ ಬಿದ್ದಿದೆ. ಇಲ್ಲಿಯ ವರೆಗೂ ಸರ್ಕಾರದವರು ಕೊಟ್ಟರತಕ್ಕ ಅನೇಕ ಹೇಳಿಕೆಗಳ, ಸರ್ಕ್ಯುಲರ್‌ಗಳ ಗತಿಯಲ್ಲ ಏನಾಯಿತ? ನಾಳೆ ಆ ನರಪಿಂಜೆ-ಉಪ ನರಪಿಂಜರಿಗೆಲ್ಲ ಅಧಿಕಾರ ಕೊಡುತ್ತೇವೆಂದು ಹೇಳಿದ್ದರಲ್ಲಾ ಅದೆಲ್ಲಾ ಏನಾಯಿತು! ಅತ್ತಕಡೆ ಅಧಿಕಾರವನ್ನು ಡೀ-ಸೆಂಟ್ರಲೈಜ್ ಮಾಡುತ್ತೇವೆಂದು ಹೇಳುತ್ತಾ ಇತ್ತ ಅಧಿಕಾರವನ್ನು ಕಸಿದುಕೊಳ್ಳುತ್ತಿದ್ದಾರೆ. ಇಷ್ಟೆಲ್ಲಾ ಅಧಿಕಾರವನ್ನು ಕಸಿದುಕೊಂಡರೂ ಆ ಪ್ಲಾಟ್‌ಫಾರಂಗಳ ಮೇಲೆ ನಿಂತು ಮಾತನಾಡುವಾಗ ನಮ್ಮ ಅಧಿಕಾರವನ್ನೆಲ್ಲ ಆ ಡೆಲ್ಲಿ ಸರ್ಕಾರದವರು ಕಿತ್ತುಕೊಂಡಿರುತ್ತಾರೆ, ನಮ್ಮ ಕೈಯಲ್ಲಿ ಏನು ಅಧಿಕಾರವಿದೆ? ಏನೂ ಇಲ್ಲವೆಂದು ಅಲ್ಲಿ ಹೇಳುತ್ತಿದ್ದಾರೆ. ಈ ಮಾತುಗಳೆಲ್ಲ ಏಕೆ? ಎಲ್ಲಾ ಅಧಿಕಾರವನ್ನು ಒಟ್ಟಿಗೆ ಕಸಿದುಕೊಂಡು ಸರ್ಕಾರ ಮಂತ್ರಿಮಂಡಳದವರೇ ಅವರ ಕಸೆಯಲ್ಲಿಟ್ಟುಕೊಳ್ಳಬೇಕೆಂದು ಹೇಳಿಬಿಡಲಿ. ಅಷ್ಟೇಕೆ ಮಾಡಬಾರದು! The Deputy Commissioner is the uncrowned king of the District. ಇಂಥ ಒಬ್ಬ ಡಿ. ಸಿ. ಕೆಳಗಿನವರು ಮಾತಿರತಕ್ಕ ಪ್ರೊಸೀಡಿಂಗ್ಸ್ ಎಲ್ಲಾ ಸರಿಯಾಗಿದೆ ಎಂದು ಆ ರೆಕಾರ್ಡಿನ ಕೊನೆಯಲ್ಲಿ ಸರ್ಟಿಫೈ ಮಾಡಿದರೆ ಸಾಲದೇನು? ಆತನಲ್ಲಿ ಸರ್ಕಾರಕ್ಕೆ ಅಷ್ಟು ನಂಬಿಕೆ ಇಲ್ಲವೇನು? ಅಥವಾ ನಮ್ಮ ಸರ್ಕಾರದಲ್ಲಿರುವ ಅಧಿಕಾರಿಗಳೆಲ್ಲಾ ಅಷ್ಟು ಅಧರ್ಮಿಗಳೇನು? ಇಲ್ಲವೇ ಅವರಿಗೆ ಅಷ್ಟೊಂದು ಬ್ರೈನ್ ಇಲ್ಲವೆಂದು ಹೇಳುತ್ತೀರೋ! At a stroke why not you dismiss them? Why do you keep such Deputy Commissioners then? Then, all your Secretaries are dullards. ಅವರು ಯಾರಿಗೂ ತಲೆಯೇ ಇಲ್ಲ-ತಲೆ ಇದ್ದರೂ ತುಂಬಾ ಜೇಡಿಮಣ್ಣು. ಅಂಥವರಿಗೇಕೆ 1,500-2,000 ರೂಪಾಯಿಗಳ ವರೆಗೂ ನಂಬಿಕೆ ಕೊಡುತ್ತಿದ್ದಾರೆ! ಹಾವನ್ನು ಕೊಂದು ಹಿಡ್ಡಿಗೆ ಹಾಕಿದ ಹಾಗೆ ಮಾಡುತ್ತಿದ್ದರೆಂದಾಯಿತಲ್ಲವೇ? ಶ್ರೀಮಾನ್ ಮೂಡಲಗಿರಿಗೌಡರು ನಾಳೆ ಇಂಥವನ ಜಮೀನನ್ನು ಅಕ್ವಯಿರ್ ಮಾಡಬೇಡಿ ಎಂದರೆ ಸಾಕು. 'ಬೇರೆಯವರಿಗೆ ಬಂತು ಗ್ರಹಚಾರ. Because you count him on his Vote; you do not want to see that this poor man suffers. ಹೀಗೆ ಸರ್ಕಾರದವರಿಗೆ ಈ 17ನೆಯ ಕ್ಲಾಜಿನಲ್ಲಿ ಕೇಳಿರತಕ್ಕಂಥಾ ಅಧಿಕಾರ ನೀಡಿಬಿಟ್ಟರೆ ಅವರಿಗೆ ಒಂದು ಪ್ರಚಂಡ ಅಧಿಕಾರವನ್ನು ಕೊಟ್ಟಂತೆ ಆಗುತ್ತದೆ ಅದು ಆಗಬಾರದು. ಆ ಅಧಿಕಾರವನ್ನು ಪೊಟಕು ಮಾಡಬೇಕು ಎಂದು ಹೇಳತಕ್ಕವರ ಪೈಕಿ ನಾನೂ ಒಬ್ಬ. ಜನ ಸೇವೆಯನ್ನು ಸಲ್ಲಿಸುತ್ತಿದ್ದೇವೆಂಬ ಸೋಗಿನಲ್ಲಿ ಇವರು ಎಷ್ಟು ದೂರ ಅನ್ಯಾಯ ಮಾಡುವುದಕ್ಕೆ ಹೋಗಿದ್ದಾರೆಂಬುದನ್ನು ಹೇಳಲಸಾಧ್ಯವಾಗಿದೆ.

ಸ್ವಾಮಿ, ಈ ತಿದ್ದುಪಡಿಗಳನ್ನು ಓದುತ್ತಿದ್ದರೆ ಹೇಗಾಗುತ್ತದೆಂಬುದನ್ನು ತಮ್ಮ ಅವಗಾಹನೆಗೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ತರಲು ಉದಾಹರಣೆಗೆ ಒಂದು ಕ್ಲಾಜನ್ನು ಓದುತ್ತೇನೆ. ನಾನು ಏನಾದರೂ ಸ್ವಲ್ಪ ಕೋಪಬರುವ ಹಾಗೆ ಮಾತನಾಡಿದರೆ ಶ್ರೀಮಾನ್ ಮುಖ್ಯಮಂತ್ರಿಗಳು ನಾನು ರಾಯಲ್ ಆಗಿಬೈದೆನೆ ಇವನಿಗೇನು ಗೊತ್ತು ಎಂದು ಹೇಳಬಹುದು.

"15-A. The State Government, at any time before an award is made by the Deputy Commissioner under section 11, call for and examine the record of any order passed by the Deputy Commissioner for the purpose of satisfying itself as to the legality or propriety of any order passed and as to the regularity of such proceedings. If, in any case, it shall appear to the State Government that any order or proceedings so called for should be modified, annulled or reversed, it may pass such order thereon as it deems fit."

ಥೇ-ಥೇ ಇದೆಂಥ ವಿಚಾರ? ಯಾವ ಒಬ್ಬ ಸೆಕ್ರೆಟರಿಗಳು ಮೊದಲು ಇಂಥ ಒಂದು ಬಿಲ್ಲನ್ನು ತಯಾರಿಸಿ ತಂದು ಶ್ರೀಮಾನ್ ಮುಂಜಪ್ಪನವರ ಕೈಯಲ್ಲಿಟ್ಟರೋ ಆಗ ಇವರ ಈ ಬಿಲ್ಲನ್ನು ನಾನು ವಾಪ್ ಮಾಡುವುದಕ್ಕೆ ಹೋದರೆ ನನ್ಮೇಲೆ ತುಂಬ ರಿಫ್ಲೆಕ್ಷನ್ ಆಗುತ್ತದೆ ಎಂದು ಹೇಳಬೇಕೆಂಬ ಅಂಶ ಇವನಿಗೇನು ಗೊತ್ತಾಗಲಿಲ್ಲವೇ? ನೀವು ಇಂಥ ನೋಟ್ ಹಾಕಿರತಕ್ಕದ್ದು ನನಗೆ ತುಂಬ ಅಪಮಾನಕರವಾದ್ದು ಎಂದು ಏಕೆ ಇವರು ತಿಳಿಸಲಿಲ್ಲ? ಬಿಲ್ಲನು ಹೀಗೆಲ್ಲಾ ಡ್ರಾಫ್ಟ್ ಮಾಡಬಾರದು, ಈ ವಿಚಾರದಲ್ಲಿ ಡೆಪ್ಯುಟಿ ಕಮೀಷನರೇ ಸಂಪೂರ್ಣ ಅಧಿಕಾರ ಹೊಂದಿರುತ್ತಾರೆ. ಅನ್ಯಾಯವಾಗಿದ್ದಲ್ಲಿ ಸರ್ಕಾರಕ್ಕೆ ಅಪೀಲ್ ತರಬಹುದೆಂದು ಏಕೆ ಮಾಡಬಾರದಾಗಿತ್ತು? ಈ ತೀರ್ಮಾನ ಕೊಡಲು ಜಿಲ್ಲಾಧಿಕಾರಿಗಳಿಗೆ ಪಬ್ಲಿಕ್ ಪ್ರಾಸಿಕ್ಯೂಟರುಗಳಿದ್ದಾರೆ. ಅಡ್ವೋಕೇಟ್ ಜನರಲ್ ಇದ್ದಾರೆ; ಇವರುಗಳನ್ನು ಕನ್ಸರ್ಟ್ ಮಾಡಿ ಸರಿಯಾಗಿ ತೀರ್ಮಾನ ಮಾಡಿ ಎಂದು ಹೇಳುವುದಕ್ಕೆ ಬದಲಾಗಿ ಆ ರೆಕಾರ್ಡುಗಳನ್ನೇ ನನಗೆ ಕಳುಹಿಸಿಕೊಡಿ ಎಂದು ಏಕೆ ಹೇಳಿದ್ದೀರಿ? ನನ್ನಂಥವನು ಯಾರಾದರೂ ಒಬ್ಬ ಅಗದವನಿದ್ದರೆ ಅವನ ಮನೆ ಮಠ ತೆಗೆಯಬೇಕೆಂಬುದೇ ಏನಿದು! ಮುಂಗಡಗಳಿಗೂ ಕೂಡ ತೀರ್ಥಹಳ್ಳಿಯಲ್ಲಿ ಅಷ್ಟಿಷ್ಟು ಜಮೀನಿದೆ. ನಾಳೆ ನವಗೆ ಅಗದವರು ಬಂದು ಅದನು ಅಕ್ವಾಯರ್ ಮಾಡಿಕೊಡಬೇಕು ಎಂದು ಹೇಳಿದರೆ ಮುಂದೇನು ಗತಿ! ಇಂಥ ಅನರ್ಥಗಳು ಈ ಮಸೂದೆಯಿಂದ ಮುಂದೆ ಸಂಭವಿಸುತ್ತವೆ ಎಂಬುದು ಇಲ್ಲರತಕ್ಕವರಿಗಾರಿಗೂ ಅರ್ಥವಾಗುವುದಿಲ್ಲವೇನು? ಆದರೆ ಅವರು ನಾನು ಜೀವಂತವಾಗಿರುವಾಗ ಎಷ್ಟೊಂದು ಕಾನೂನುಗಳನ್ನು ಮಾಡಿಬಿಟ್ಟಿದ್ದೇನೆ ಎಂದು ಅಂದು ಕೊಳ್ಳಬಹುದು, ಆದರೆ ಅದೊಂದು ದೊಡ್ಡಸ್ತಿಕೆಯಾಗಲಲ್ಲ. ಆದರೆ ಜೀವಂತವಾಗಿರುವಾಗ ಒಂದು ಒಳ್ಳೆಯ ಕೆಲಸವನ್ನು ದೇಶಕ್ಕೆ ಮಾಡಿಬಿಡಿ. ಇಂಥ ಹತ್ತಾರು ಕಾನೂನುಗಳಿಂದ ನಮಗೆ ಒಳ್ಳೆಯ ಹೆಸರು ಬರಲಾರದೆಂಬುದನ್ನು ಒತ್ತಿ ತಿಳಿಸಬಯಸುತ್ತೇನೆ. ಇಂಥ ದೇಶಕ್ಕೆ ಅಪಾಯಕಾರಿಯಾದ ಹತ್ತಾರು ಕಾನೂನುಗಳನ್ನಾಗಲೀ, ಕಾರ್ಯಗಳನ್ನಾಗಲೀ ಮಾಡಿದರೆ ಯಾರೂ ಶ್ರೀಮಾನ್ ಮುಂಜಪ್ಪನವರ ಬಗ್ಗೆ ಒಂದು ರಾಮಾಯಣ ಬರೆಯುವುದಿಲ್ಲ. ಅದಕ್ಕೆ ಬದಲು ದೇಶಕ್ಕೆ ಒಂದು ಉಪಕಾರವಾಗತಕ್ಕ ಕಾರ್ಯ ಮಾಡಿದರೆ ಅವರ ಹೆಸರನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡುತ್ತಾರೆ. ಈಗ ಲ್ಯಾಂಡ್ ರಿಫಾರಂಸ್ ಬಿಲ್ಲನ್ನು ತರಲು ಹೊರಟಿದ್ದಾರೆ. ಆದರೆ ನಾನು ಮಾಡತಕ್ಕ ಭಾಷಣಗಳೇನೋ ಉದ್ದವಾಗಿರಬಹುದು. ನನ್ನ ಭಾಷಣದ ಬಗ್ಗೆ ಅವರೇನೂ ಮಾಡದಿದ್ದಾಗ್ಗೂ ಆ ತುಂಡು ಭಾಷಣ ಮಾಡತಕ್ಕವರ ಬಗ್ಗೆ ಅವರು ಏನು ಮಾಡಿದ್ದಾರೆ!

ನಿಮ್ಮ ಕಾಯಿದೆ ಸತ್ಯಕ್ಕೆ ದೂರವಾಗಿರುವುದರಿಂದ, ಒಂದು ತಿಂಗಳೊಳಗಾಗಿ ವಾಪಸು ಕೊಡಬೇಕೆಂದು ಹೇಳಿದರೆ ಅದು ಒಪ್ಪುವಂತಹುದೇ? ಕಾನೂನಿನಲ್ಲಿ ಅಧಿಕಾರವಿದೆ ಎಂದು ಕರಗತ ಮಾಡಿಕೊಂಡು ಒಪ್ಪಿಕೊಳ್ಳಬಹುದೇ ಎಂದು ನಾನಿಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ಅಪೆಂಡಿಂಗ್, ಲ್ಯಾಂಡು ಅಕ್ವಿಸಿಷನ್ ಬಿಲ್ಲನ್ನು ಯೂನಿಫಾರಂ ಆಗಿಮಾಡುತ್ತೇವೆ ಎಂದು ಒಂದು ಚಂದ್ರಾಯುಧವನ್ನು ತೆಗೆದುಕೊಂಡಿದ್ದಾರೆ. ಇದನ್ನು ಮಾಡಿಬಿಟ್ಟರೆ ಐದಾರು ಎಕರೆಯಷ್ಟು ಹೊಲ ಗದ್ದೆ ಬರುತ್ತದೆ..... ಮತ್ತು ಇದರಲ್ಲಿ ಒಂದು ರೀತಿಯಾವ political clique ಇದೆ.

When you retire to the Chambers, you cooly think over and apply your mind and you will see how dangerous this piece of legislation is.

ಇದರಲ್ಲಿ ತಮ್ಮ ಸ್ನೇಹಿತರು 148 ಜನರು ಯಾರಿದ್ದಾರೋ ಅವರಲ್ಲಿ ನೂರು ಜನಕ್ಕೆ voice ಎನ್ನುವುದೇ ಇಲ್ಲ, ಇದರಿಂದ ಸ್ವಲ್ಪ ಅನಮಾಧಾನವಿದರೂ ಸಮಾಧಾನವಾಗಿದಾರೆಂದು ಈ ರೀತಿ ಕಾನೂನನ್ನು ತರಬಹುದೇ ಎನ್ನುವುದನ್ನು ತಮ್ಮ ಅವಗಾಹನೆಗಾಗಿ ಹೇಳುತ್ತಿದ್ದೇನೆ.

ಸ್ವಾಮೀ, ನಮ್ಮ ಮುಂತ್ರಿಗಳು ಎಷ್ಟು ನಿರ್ಭಯವಾಗಿ ಮತ್ತು ಎಷ್ಟು ಕಲ್ಲು ಮನಸ್ಸಿನಿಂದ ಈ ಕಾನೂನನ್ನು ತಂದಿದ್ದಾರೆ ಎಂದರೆ ಅವರು ಇಲ್ಲಿ ಕೊಟ್ಟಿರುವ Statement of Objects and Reasons ನ್ನು ನೋಡಿದರೇ ಚೆನ್ನಾಗಿ ಗೋಚರವಾಗುತ್ತದೆ.

"any building or other structure in any village for the common use of the inhabitants of such village, or any godown for any society, registered or deemed to be registered under the Co-operative Societies Act for the time being in force"

ಈ ಬೆಂಗಳೂರಿನಲ್ಲಿರುವ State Theatre ಗೆ ಕೊಟ್ಟಿರುವ ಜಾಗವನ್ನು ಕೊಡಕೂಡದು ಮತ್ತು ಇದನ್ನು ತೆರೆಯುವುದಕ್ಕೆ ಅವಕಾಶ ಕೊಡಕೂಡದು ಎಂದು ಸರಕಾರ ಎಷ್ಟು ಪ್ರಯತ್ನಪಟ್ಟರೂ ಆಗಲಲ್ಲ. ಇದಕ್ಕೆ Government of India ದಿಂದ

"They have absolutely no right. After all it is a State

Government. It cannot acquire to the State any godown."

ಹೀಗಾದರೆ ನಿಮ್ಮ ಕಾನೂನಿಗೆ ಏನು ಅಧಿಕಾರವಿದೆ? ಇದೂ ಅಲ್ಲವೆ, ತಮಗೆ ಘನವಾದ ಹೈಕೋರ್ಟಿನ ವರೇನಾದರೂ ಅಧಿಕಾರ, ಅಷ್ಟು ದೂರ ವ್ಯಾಪ್ತಿ ಇದ್ದರೆ ನನ್ನನ್ನು ಕೂಡ Detention ನಲ್ಲಿಟ್ಟು ನನ್ನ ಬಿಲ್ಡಿಂಗು ಇತ್ಯಾದಿಗಳನ್ನೆಲ್ಲ ಹೈಕೋರ್ಟಿನ ಮೂಲಕ ಪಡೆದು ನುಚ್ಚುನೂರೇಕಾಯಿ ಮಾಡಿಬಿಡುತ್ತಿದ್ದಿರಿ. ಅದಕ್ಕೋಸ್ಕರವಾಗಿ ನೀವೇನು ಬಿಲ್ಲು ತರತೀರೋ ಅದರ practical difficulties ಏನು? ಪ್ರತ್ಯಕ್ಷವಾಗಿ, ಅಪ್ರತ್ಯಕ್ಷವಾಗಿ ಬರುವ ಕಷ್ಟಗಳೇನು ಎನ್ನುವುದನ್ನೇನಾದರೂ ಆಲೋಚನೆ ಮಾಡಿದ್ದೀರಾ? ಈಗ ಪಂಚಾಯತಿಗಳು ಬೇರೆ ಆಗಿವೆ. ಅಲ್ಲಿಯೂ ಕೂಡ Elected Members ನಿಮ್ಮವರೇ ಇರುತ್ತಾರೆ. ಸ್ಥಳದಲ್ಲಿರತಕ್ಕ ಅಧಿಕಾರಿಗಳೂ ಸಹ ಅವರ ಕೈಯಲ್ಲೇ ಇರುತ್ತಾರೆ.

Influencing the officer amounts to corruption. The Chief Minister so oldly said that it would not amount to corruption.

ಇನ್ನು ತಾಲ್ಲೂಕು ಬೋರ್ಡುಗಳಲ್ಲಿ ಪ್ರೆಸಿಡೆಂಟ್ಸಾಗಿರುವವರು, ವೈಸ್ ಚೇರ್ಮನ್ನಾಗಿರುವವರು ನಿಮ್ಮವರೇ ಆಗಿರುವಾಗ ಅಸಿಸ್ಟೆಂಟು ಕಮೀಷನರಾಗಿರುವವರು ಅಕ್ಟಿಸಿಷನ್ನು ಪ್ರೊಸೀಡಿಂಗ್ಸ್‌ನ್ನು ಹೇಗೆ ತಾನೇ ನಯಾಗಿ ಮಾಲುಸಾಧ್ಯ!

ನಮ್ಮ ಸ್ನೇಹಿತರು ಈಗ ತಾನೇ ಹೇಳಿದರು. ಏನಾದರೂ ಹೆಚ್ಚಾಗಿ ತೆಗೆದುಕೊಂಡಿರುವ ಹಣವನ್ನು ಸರಕಾರಕ್ಕೆ Refund ಮಾಡಬೇಕಾದರೆ

Is it not your duty to set the law in motion and see that the money is paid to the man from whom you have acquired the property?

ಒಬ್ಬ ಮಾನ್ಯ ಸದಸ್ಯರು.—ಹಣಕ್ಕೆ ಬಡ್ಡಿ ಕೊಡುತ್ತಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಣಕ್ಕೆ ದಾಖಲೆ ಇಲ್ಲದಿದ್ದರೆ ಬಡ್ಡಿ ಹೇಗೆ ಕೊಡುತ್ತಾರೆ? ಮೂರು ಲಕ್ಷ ಸಾಲ ತೆಗೆದುಕೊಂಡು ಎರಡು ಲಕ್ಷ ಎಂದು ಮೂರು ತಿಂಗಳೊಳಗಾಗಿ ಕೊಟ್ಟಂತೇನೇ. ಇವರಿಗೆ ಬಡ್ಡಿ ಯಾದರೂ ಕೊಡಲು ಹೇಗೆ ಸಾಧ್ಯ! ಬೆಳಗ್ಗೆದ್ದರೆ ಅಮೆರಿಕಕ್ಕೂ Government of India ಕ್ಕೂ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಅಪರಿಂದ ತಂದಿರುವ ದುಡ್ಡಿಗೇ ಬಡ್ಡಿ ಕೊಡಲಾಗುತ್ತಿಲ್ಲ. ಹೀಗಿರುವುದರಿಂದ ಈ ಬಿಲ್ಲು ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ಇವೆಲ್ಲವನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿ ಇದರಲ್ಲಿ ಅನ್ಯಾಯವಾಗುವಂತಹ ಸಂದರ್ಭಗಳನ್ನು ತಪ್ಪಿಸಿ ನ್ಯಾಯ ದೊರಕಿಸಿ ಕೊಡಿ ಎಂದು ಹೇಳುತ್ತಿದ್ದೇನೆ. ಹೀಗೆ ಕಾನೂನಿರುವುದು ಸರ್ವಥಾ ಸರಿಯಿಲ್ಲ.

ಇನ್ನು ಅಮೆಂಡಿಂಗ್ ಸೆಕ್ಷನ್ನು 11 ರಲ್ಲಿ ತಮಗಿರತಕ್ಕ vast powers ಏನಿವೆ ಅವನ್ನೆಲ್ಲ ಡೆಪ್ಯುಟೀ ಕಮಿಷನರ ಅಧಿಕಾರಕ್ಕೆ ಕೊಡಲಾಗಿದೆ. You have got the Divisional Commissioner. At least let it lie over at a certain stage; why should it go to the Government? According to the present rules, the acquisition proceedings are delayed. ನಿಮಗೆ ಬೇಕಾಗಿದ್ದರೆ ಡೆಪ್ಯುಟೀ ಕಮಿಷನರಿಗೇನೆ ಟೆಲಿಫೋನ್ ಮಾಡಿ ಹೇಳುತ್ತೀರಿ. You will just telephone to the Deputy Commissioner and ask him to do it at once. Why should it come here? ಇಲ್ಲದಿದ್ದರೆ ಡೆಪ್ಯುಟೀ ಕಮಿಷನರವರಿಗೆ ಈಗಲೇ ಅವನ ವಿಚಾರ ಹೀಗಿದೆ ನೋಡಿಕೊಳ್ಳಿ ಎಂದು ಹೇಳುತ್ತಿರುವಂತೆ ಇದು open seeret ಆಗಿದೆ. ಅದಕ್ಕೋಸ್ಕರ ಇಂತಹ ಅಧಿಕಾರಕೊಡುವುದು ಸರಿಯಲ್ಲ. ಇಷ್ಟು ಹೇಳಿ ಸೆಲೆಕ್ಟ್ ಕಮಿಟಿಯವರು ಇದನ್ನು ಕೂಲಂಕಷವಾಗಿ ವಿಮರ್ಶೆಮಾಡಿ ಇದರೊಳಗೆ ಅಡಕವಾಗಿರುವ ನಮ್ಮ ಅಭಿಪ್ರಾಯಗಳನ್ನು ಗಮನಕ್ಕೆ ತೆಗೆದು ಕೊಳ್ಳಬೇಕೆಂದು ಹೇಳುತ್ತಿದ್ದೇನೆ. ಶ್ರೀಮಾನ್ ಮುಂಜಪ್ಪನವರ ಮೇರೆ ನಾನು ಇಷ್ಟು ಕಟುವಾಗಿ ಟೀಕೆ ಮಾಡುತ್ತೇನೆ ಎಂದರೆ ಅದು ಅವರನ್ನು ವೈಯಕ್ತಿಕವಾಗಿ ಟೀಕೆ ಮಾಡಬೇಕು ಎಂದು ಮಾತನಾಡುತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಮಾನವರು ಅಶಾಶ್ವತಜೀವಿಗಳು.

5-30 P.M.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೆಂದ್ರ ಸರ್ಕಾರ ಎಂದು ಹೇಳುತ್ತಾರೆ. ನೆಹ್ರೂರವರನ್ನು ಕೆತ್ತು ಹಾಕುವ ಧೈರ್ಯ ಯಾರಿಗೂ ಇಲ್ಲ. ಶ್ರೀ ನಿಜಲಿಂಗಪ್ಪನವರು ಹೋದರು, ಜತ್ತಿಯವರು ಬಂದರು. ಜತ್ತಿಯವರು ಹೋದರೆ ಇನ್ನೊಬ್ಬರು ಬರುತ್ತಾರೆ. ಜೆಸ್ ಅಟ ಇದ್ದ ಹಾಗೆ. ನಾನು ಚೀಫ್ ಮಿನಿಸ್ಟರ್ ಆಗಬೇಕು ನಾನು ಚೀಫ್ ಮಿನಿಸ್ಟರ್ ಆಗಬೇಕು ಎಂದು ರೇಸ್ ಇದೆ. ಅದಕ್ಕೋಸ್ಕರ ನಾನು ಹೇಳುತ್ತೇನೆ, ಇದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ನಾನು ವೈಯಕ್ತಿಕವಾಗಿ ಶ್ರೀ ಕಡಿದಾಳ್ ಮಂಜಪ್ಪನವರು ಕೆಳಕ್ಕೆ ಬಾರಲಿ ಎಂದು ಹೇಳಲಿಲ್ಲ. ಒಂದು ವೇಳೆ ಕಡಿದಾಳ್ ಮಂಜಪ್ಪನವರು ಕೆಳಗೆ ಬಂದರೆ ಅವರ ಹಿಂದೆ ಬೆಂಚಿನಲ್ಲಿ ಕುಳಿತು ಕೊಂಡಿರುವವರು ಅವರ ಸ್ಥಾನಕ್ಕೆ ಬರುತ್ತಾರೆಯೇ ವಿನಾ ನಾನು ಬರುವುದಿಲ್ಲ. ಅದಕ್ಕೋಸ್ಕರ ಹೇಳಿದೆನೇ ಹೊರತು ಬೇರೆ ದೃಷ್ಟಿಯಿಂದ ಅಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ನಾನು ಶಾಶ್ವತವಾಗಿ ಇರುತ್ತೇನೆಂದು ಹೇಳಿದೆನೆಯೇ? ಹಾಗೆ ಶಾಶ್ವತವಾಗಿ ಇರುವುದಕ್ಕೆ ನಾನು ಮಾರ್ಗಂಕಡೇಯನೇ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ಕಾರದವರು ಸೆಲೆಕ್ಟ್ ಕಮಿಟಿಗೆ 18ಜನ ಸದಸ್ಯರನ್ನು ಹಾಕಿದ್ದಾರೆ. ಅವರಲ್ಲಿ ನಾನು ಅತಿವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸರ್ಕಾರಕ್ಕೆ ಕೊಟ್ಟ ಪವರ್ಸ್ ಮೊಟಕು ಮಾಡಬೇಕು. ಡಿವಿಜನಲ್ ಕಮೀಷನರ ಸೈಜಿನಲ್ಲಿ ಪ್ರವೇಶಿಸುವುದಕ್ಕೆ ಸರ್ಕಾರಕ್ಕೆ ಅವಕಾಶ ಇರಕೂಡದು, ನಾನು ಒಂದು ವಿಚಾರವನ್ನು ಮಾನ್ಯ ಸದಸ್ಯರಿಗೆಲ್ಲಾ ಹನೆಗೆ ತರುತ್ತೇನೆ. ಒಂದು ಪಾರ್ಕಿಟಿಂಗ್ ಸೊಸೈಟಿಯ ನ ಬಂಧದಲ್ಲಿ ಅಕ್ಟಿಜಿಪನ್ ಪ್ರೊಸಿಡಿಂಗ್ಸ್ ಆದ ಮೇಲೆ 2½ ಲಕ್ಷಹಣ ಕೊಟ್ಟ ಮೇಲೆ ಅಕ್ಟಿಜಿಷನ್ ಅವಗಾಹನೆಗೆ ಪಿತ್ತಾ ಮಾಡಿದ್ದಾರೆ. ಅದನ್ನು ತಮ್ಮ ತರುತ್ತೇನೆ. ದುರುದ್ದೇಶ ಪೂರ್ವಕವಾಗಿ ಕಾನೂನು ಮಾಡಬಾರದು, ಜನತೆಯ ಉಪಯೋಗ ಕ್ಕೋಸ್ಕರ ಮಾಡ ಬೇಕು ಎಂದು ಸೆಲೆಕ್ಟ್ ಕಮಿಟಿ ಮೆಂಬರುಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಧಿಕಾರವನ್ನು ಸರ್ಕಾರಕ್ಕೆ ಹೆಚ್ಚಿಗೆ ಕೊಡಕೂಡದು; ಕೂಲಂಕಷವಾಗಿ ಅದನ್ನು ಪರಿಶೀಲನೆ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

SRI B. VAIKUNTA BALIGA.—I rise to support the Bill before the House. But by way of a preface, I wish to make one or two observations which might not be unhelpful. The stage at which we are considering is that the Bill was introduced in the Council and it has come here by way of concurrence for referring the Bill to a Select Committee. That gave rise to a certain amount of debate, I may not call it acrimonious, but where divergence of opinion was indicated. I would not have ventured to refer to it but for the circumstances that these remarks are likely to attract attention elsewhere and likely to generate certain amount of discussion. I attempted to catch the eye of the Speaker just to make the position clear that when the Bill was introduced in the Council, it has been deliberated upon by it and when it comes here, there is no question of re-introducing it and it has to be discussed at the stage when it comes here. It was thought that the Hon'ble Minister in charge sought the leave of the House and the Speaker put it in that manner and leave of the House was given. Sir, perhaps it might have been more appropriate to put it in the manner it has been sent by the Council without mentioning the name of the Members, because proposing the names of Members of the Select Committee comes at a little later stage when the concurrence is given, in which case, the scope of the Bill or the discussion before the House would not have been misplaced and all the principles that are there would have been open for discussion. Anyhow, we have proceeded on with the discussion of the Bill. The scope of the discussion before the House is that is not only deals with the question of extension but also with amendments. If we peruse the heading of the Bill, it can be seen that it is the Land Acquisition (Mysore Extension and Amendment) Bill, 1958. So, there are two definite components. One is that the entire Act is extended to an area where it was not in existence whatsoever and having introduced it, there, a sort of uniformity is tried to be brought about and further amendments are suggested. The scope of the discussion of the entire Bill is not only on the entire Act but also on the modifications that are put in this Bill. So, we must remember that after the advent of integration, a particular kind of procedure for bringing about uniformity arises. Therefore, Sir, there is absolutely nothing wrong in the Council asking for the concurrence just as we would have asked for their concurrence if the Bill had been introduced here. There is nothing wrong in the procedure or approach they are making except that there is a certain amount of prestige or idea that is tried to be brought in now. After all, we are the two limbs of a body framing a legislation and we cannot afford to quarrel with each other. It is a question of accommodation, which has to be provided by one or the other. Under the circumstances, and that being for a short period till the new rules are introduced there to bring them into uniformity, it would be graceful for us to agree to the suspension of the rule which the Hon'ble Minister has asked for. We could have easily and that we agree and there should not have been the question of putting it to a vote. I am referring to it because they are bound to ask for further leave of this House with regard to other things also, so that at the time when further leave is asked for with regard to any other Bill, the Hon'ble Members may kindly bear with our brethern in the Council; there is nothing wrong in it and what is more, the opinion of the Select Committee is not going to be the last word on the point. The Report will again come before us and there will be time enough to deliberate upon that.

Now, coming to the Bill as it is, I find that there are some points which are controversial. Before I go seriatim may I point out that there are some verbal mistakes or at any rate failure on my part to comprehend. I refer to sub-clause (2) of clause 2, where it is said:

> "As from the date appointed under sub-section (3) of section 1, the amendments made by the Acts repealed by sub-section (1)

(hereinafter in this section referred to as the repealed Acts) shall cease to continue.'

I do not know whether the idea has been fully expressed. Am I to understand that the word 'continue' means 'continue in operation' or merely 'continue'. It does not appear to be happy. It is for the Hon'ble Minister to see whether appropriate wording is there or whether it requires recasting. Similar wording is used in the proviso to this section. The proviso says:

"Provided that in respect of provisions which cease to continue."

Does this also mean 'continue to be in operation'? Sir, I refer in particular to the clause 7 where an amendment of Section 11 of Central Act 1 of 1894 is sought to be introduced. I learn from the Statement of Objects and Reasons that this amendment is prevailing in Bombay area and it is an amendment carried out by the Bombay Legislature. We are not concerned whether it prevails elsewhere or not. We are perfectly at liberty and it is our legitimate duty and responsibility to see whether this proviso is wanted or not. Therefore, in that light I am saying that we must examine that provision. Clause 7 says:

"Provided that no such award shall be made by the Deputy Commissioner, without the previous approval of the State Government."

Now, Sir, we must remember the purpose with which the various clauses one inserted in the Land Acquisition Act and whether the purpose for which they are wanted by the particular bodies could be carried out by this amendment. It is in that light we that we have to see whether it would be proper to say that before the Deputy Commissioner does anything, he has got to obtain the previous approval of the State Government.

If the power given for acquisition is wrongly exercised it would stand good unless it is set aside by a civil court. If the idea is to safeguard against such contingencies, the wording of the Statute does not make it clear. If the Acquisition Officer should submit the case to Government it would amount practically to a negation of the principle of independence that should be vested in the Officer. The Officer is rendered powerless. He can only give a preliminary report for the approval of the Government. Whether the Acquisition Officer should be compelled to submit the case to Government or not is a matter which the House has to consider seriously. If that is the position it means that the discretion is practially fettered. Under the Law his position is more or less analogous to a court exercising independent function and for this purpose he should be given full leg-room and his decision should not be subject to the approval of the Government. We should remember that by enacting compulsory acquisition of land, we are interfering with the fundamental rights of a citizen in regard to property. We should, therefore, consider the question carefully if the powers of the Acquisition Officer should be tampered with by the Government.

We also find that the Deputy Commissioner may almost sit as an appellate authority over the Land Acquisition Officer. He would be the final authority, not the Government. How can the Government then ensure that justice is done? The basic principle in deciding compensation is that it should be fair and proper. It should be remembered that we are compulsorily acquiring land and in order to compensate for the loss a man undergoes owing to the element of compulsion, 15 per cent solatium is normally paid. There should be no discontentment or frustration created in the minds of people whose properties are acquired. We should now ascertain if the provisions of the Bill have kept in view the accepted principles of jurisprudence. I feel that the Government should have power over the Deputy Commissioner in this respect.

In Clause 12 we find provision for correction of clerical errors, accidental slips, etc. This is no doubt desirable but when it comes to the question of recovering from a party, the debt is treated as arrears of land

(SRI B. VAIKUNTA BALIGA)

revenue. I would like to know from what assets it would be recovered. Are we going to leave it to the rules to be framed? I think recovery of a debt arrears of as land revenue is a debatable point. Such arrears are recoverable in various ways. The debt is a charge on that very property or over other assets belonging to the individual. There is no question of creating a charge on the very land acquired because it is already in the hands of the authorities. But if we are going to create a charge on other assets, I think it would be extremely unfair because the rights of other creditors would be defeated to that extent. Third parties are bound to resist. With regard to clause 15 (*a*) I think it is a wide power which the Government is taking into its own hands. An Hon'ble member was trying to say that it was inconsistent with clause (*a*). They are different. The State Government has the power to call for proceedings and pass orders Government's power is not limited. It may call for proceedings at any stage. I of course agree that the power given is wide. When an award had been made, Government should have no such power.

About clause 4, I do not know why the rate of interest should be reduced. When once an award is made, and the amount is deposited, where is the question of interest. Six per cent is certainly not unreasonable. hy are we mentioning 4½ per cent. Is it because it is the rate at which Government securities are selling or is it because it is the bank rate. When a man is denied property, why should he be paid at 4½ per cent? Unle s Unless he is a rich man I would certainly think that there is no ground at all to reduce the rate of interest from 6 to 4½ per cent. I may say that there are instances where in the local bodies like Bangalore Corporation have put up proceedings that the estimate made is such that their budget does not provide for such a large amount. These are contingencies in which the person whose property is acquired is going to proceed against the Government. I feel that reduction from 6 to 4½ per cent may not be the proper one.

Coming to clause 18, I really find that there is something which has been missed.

> "If the charges and incidental to such acquisition are not defrayed from such funds by a local authority after such time as may be fixed by the State Government, the State Government may by order direct the person in custody of such fund to pay the amount due in priority to any other charge against such fund and such person shall, notwithstanding anything contained in any law, so far as the fund to the credit of the local authority admit, be bound to comply with such order."

Very wide powers. This is a very serious provision that has been made. Let me put forward the reasons to support the view. We are aware that local bodies raise loans by debenture. Let as think the very Government has guaranteed payment of debentures and there is security created in favour of the third party. In case of land acquisition, if the charges incidental to such acquisition are not defrayed from such funds, the Government will direct the person in custody of the fund to pay the amount. If the amount is not deposited the Government shall have the right to direct the person in charge of the fund to pay. Government cannot do any such thing because they cannot interfere with the rights vested in debentures and the local body. By complicating the situation Government and everybody will be dragged to litigation.

Then I come to clause 19.

"If any difficulty arises in giving effect....." This is a very strange situation. What is meant by "difficulty"? What is the power that is given if a situation arises where somebody or Government feels that there is a difficulty—What are the limits of that "application" of difficulties idea?

> "If any difficulty arises in giving effect to the provisions of this Act, or of the principal Act, as extended by this Act in their

application to the territories of the State of Mysore or any area therein in consequence of the transition to the said provisions from the corresponding provisions of the Acts in force therein immediately before the commencement of this Act, the State Government may, by order published in the official Gazette make....."

We are delegating the power. What an amount of criticism there is against subordinate legislation or delegated egislation is a question on which much could be said on either side. It may be said that this delegation should be hedged in by a safety valve if this power is given "to an order published in the Official Gazette." It comes to this: Government feels there is difficulty. As it is we have no precise ideas of this difficulty. It may be from anything to anywhere. It is not practically delegating the entire power to amend the Act and in accordance with the rules passed and orders passed notifications will be good. But as to how far this is, in a court of law I am not competent to say. I am not at all unaware that difficulties arise but there are sufficient saf guards in law to solve them. Where is the difficulty in every step to bring in an amendment? I find such a provision is existing in two other Acts. There is a stimulant to these highly controversial matters. If powers are given would it solve the difficulty? If we have any difficulty let us know the nature of the difficulty and how it has to be dealt with. All these have to be done. A very wide power has been asked for by saying "the State Government may, by order published in the official Gazette, make such adaptations or modifications....." I really do not understand "modification". Modification may be by plus or minus. It reads like this: "Adaptations or modifications of the said Act not affecting the substance or make such provisions as appear to it to be necessary or expedient for removing the difficulty." There is a proviso like this:

"Provided that the power conferred by this sub-section shall not be exercisable after the expiry of three years from the commencement of this Act."

The powers given are very wide and that is why the time limit is put. Is there anything to indicate for what purpose this period of three years is put? Clause 19, particularly the last sentence "make such adaptations or modifications of the said Act not affecting the substance or make such provisions as appear to it to be necessary or expedient for removing the difficulty" basically involves some difficulty. I attempted to make ideas clear that difficulties are to be faced in some other manner than by delegation. If this delegation is made it should be within certain reasonable limits. The House may take into consideration all these points and such amendments as are necessary may be brought.

As I said, generally I support the Bill.

MR. SPEAKER.— The House will now rise and meet tomorrow at 8-30 A.M.

The House adjourned at Six of the Clock to meet again at Thirty Minutes past Eight of the Clock on Saturday, the 5th December 1959.

WD 1743—GPB—900—21-3-1961